


International Journal of Kannada Research
www.kannadajournal.com

**ISSN: 2454–5813**
IJKR 2023; 9(3): 159-160
© 2023 IJKR
www.kannadajournal.com
Received: 25-05-2023
Accepted: 30-06-2023

**ತಾಯವ್ವ ಮಾಂಗ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ, ಕ. ರಾ. ಅ. ಮ. ವಿ. ವಿ, ವಿಜಯಪುರ, ಕರ್ನಾಟಕ, ಭಾರತ

**Corresponding Author:**
**ತಾಯವ್ವ ಮಾಂಗ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ, ಕ. ರಾ. ಅ. ಮ. ವಿ. ವಿ, ವಿಜಯಪುರ, ಕರ್ನಾಟಕ, ಭಾರತ

# ಅರುಣಾ ನರೇಂದ್ರ ಕೊಪ್ಪಳ ಕಾವ್ಯದಲ್ಲಿ ಸ್ತ್ರೀ ಸಂವೇದನೆ

**ತಾಯವ್ವ ಮಾಂಗ**

## ಪೀಠಿಕೆ

ಪ್ರಕೃತಿಯು ಸ್ತ್ರೀ ಪುರುಷರೆಂಬ ಭೇದಭಾವವಿಲ್ಲದೆ ಸಮಾನ ಶಕ್ತಿ, ಸಾಮರ್ಥ್ಯ ನೀಡಿದರು. ಈ ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ ಸ್ತ್ರೀ ಪುರುಷರ ಮಧ್ಯ ಭೇದವನ್ನುಂಟುಮಾಡಿ ಸ್ತ್ರೀಯು ಕನಿಷ್ಠವೆಂದು ಬಿಂಬಿಸಲು ಪ್ರಯತ್ನಿಸುತ್ತಾನೆ. ಆದರೆ ಸ್ತ್ರೀಯು ಪುರುಷನಿಗಿಂತ ಯಾವುದೇ ಕ್ಷೇತ್ರದಲ್ಲಿ ಹಿಂದಿಲ್ಲ. ಆಧುನಿಕ ಸಂದರ್ಭದಲ್ಲಿ ಸ್ತ್ರೀಗೆ ಪ್ರಬಲವಾದ ವ್ಯಕ್ತಿತ್ವ ಕಟ್ಟಿಕೊಳ್ಳಲು ಪೂರಕವಾದ ವಾತಾವರಣ ನಿರ್ಮಾಣವಾಗಿದೆ. ಆದಕಾರಣ ತನ್ನ ನಿತ್ಯ ಬದುಕಿನ ಆತಂಕ, ನೋವು, ಶೋಷಣೆ, ದುಃಖ ಇಂತಹ ಹಲವಾರು ತುಮೂಲುಗಳನ್ನು ಸಾಹಿತ್ಯ ಮುಖೇನ ವ್ಯಕ್ತಪಡಿಸಲು ವಿಶೇಷವಾಗಿ ಕಾವ್ಯ ಪ್ರಮುಖ ಮಾರ್ಗವಾಗಿ ಗೋಚರಿಸುತ್ತದೆ.

ಪುರುಷ ಸಾಹಿತ್ಯದಲ್ಲಿ ಸ್ತ್ರೀಯ ಸಂವೇದನೆಯು ಸಮರ್ಥವಾಗಿ ಮೂಡಿಬರಲು ಸಾಧ್ಯವಿಲ್ಲ. ದಲಿತರ ಸಾಹಿತ್ಯವನ್ನು ಹೇಗೆ ದಲಿತರು ಬರೆದರೆ ಅದು ದಲಿತ ಸಾಹಿತ್ಯವಾಗುತ್ತದೆ. ಹಾಗೇ ಸ್ತ್ರೀಯರು ಸ್ವತಃ ಅನುಭವಿಸಿದ ನೋವುಗಳನ್ನು ನೇರವಾಗಿ ಸಾಹಿತ್ಯ ರೂಪದಲ್ಲಿ ಮುದ್ರಿಸಿದಾಗ ಅದು ನಿಜವಾದ ಸ್ತ್ರೀ ಸಂವೇದನೆ ಆಗುತ್ತದೆ. ಹೆಚ್ಚಾಗಿ ಮಹಿಳಾ ಸಾಹಿತಿಗಳು ಸಂವೇದನೆಯನ್ನು ನಿವೇದನೆ, ಸ್ವಗತ, ಬಂಡಾಯ ಮತ್ತು ಪ್ರತಿಭಟನೆ ರೂಪದಲ್ಲಿ ವ್ಯಕ್ತಪಡಿಸುತ್ತಾರೆ.

ಶತಮಾನಗಳಿಂದ ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯದಿಂದ ನೊಂದು, ಬೆಂದು ಬಸವಳಿದಿಂದು ಈಗ ಇತಿಹಾಸವಾದರು, ಲಿಂಗ ತಾರತಮ್ಯದ ವೈಪರಿತ್ಯಗಳು ಇಂದಿಗೂ ಜೀವಂತವಾಗಿದೆ. ಅವಳ ದ್ವಿತಿಯ ದರ್ಜೆಯ ಸ್ಥಾನ ತನ್ನ ಕಪಿಮುಷ್ಠಿಯನ್ನು ಪೂರ್ಣ ಸಡಿಲಿಸಿಲ್ಲ. ಈ ಹೊತ್ತಿನ ದೌರ್ಜನ್ಯಗಳ ಅರಿವು, ಜಾಗೃತಿಯ ತಹತಹಿಕೆ, ಸ್ತ್ರೀವಾದ ನೆಲೆಯ ಆಶಯಗಳು, ಚಳುವಳಿಗಳಿಂದ ಸಾಧಿತವಾಗಿರುವ ಅಂಶಗಳು. ಜೊತೆಯಲ್ಲಿ ಇದ್ದರು ಸಮಾಜದ ಎಲ್ಲಾ ವರ್ಗದ ಮಹಿಳೆಯರು ತಮ್ಮದೇಯಾದ ಬದುಕಿನ ನಿರ್ಣಯಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲಾಗದಂತಹ ಸ್ಥಿತಿಯಲ್ಲಿ ಇನ್ನೂ ಬಂಧಿಯಾಗಿದ್ದಾರೆಂಬ ನಗ್ನ ಸತ್ಯವನ್ನು ಒಪ್ಪಿಕೊಳ್ಳಲೇ ಬೇಕಾಗಿದೆ ಕಾಲ ಬದಲಾಗುತ್ತದೆ, ಬದಲಾಗಿದೆ. ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲಿಯು ಮಹಿಳೆ ತನ್ನ ಪ್ರತಿಭಾಪೂರ್ಣ ಛಾಪನ್ನು ಬೀರುತ್ತಿದ್ದರು, ಮನೆಯೊಳಗಿದ್ದ ಮಹಿಳೆ ವಿಶಾಲ ವಿಶ್ವದೆಡೆಗೆ ದಾಪುಗಾಲು ಹಾಕಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿದ್ದರು ಪುರುಷತನದ ಅಡ್ಡಗಾಲು ಮಹಿಳೆಯ ಮಾನಸಿಕ ಶಕ್ತಿಯ ಮುಂದೆ ಅವಳ ದಕ್ಷತೆಯ ಮುಂದೆ ನಿಲ್ಲಲಾರದ ಅವನ ದೌರ್ಬಲ್ಯ ಪೂರಿತ ವ್ಯಕ್ತಿತ್ವ, ಕೀಳರಿಮೆ ಮಹಿಳೆಯನ್ನು ಮುಂದುವರಿಯಲು ಬಿಡುತ್ತಿಲ್ಲ. ಮುಕ್ಕಾಲು ಸಂದರ್ಭಗಳಲ್ಲಿ ಅವಳ ಪ್ರಗತಿಶೀಲತೆಯೇ ಅವಳಿಗೆ ಕುತ್ತಾಗಿರುವ ಪ್ರಸಂಗಗಳು ಇಲ್ಲದಿಲ್ಲ. ಮಹಿಳೆ ಎಂಬ ವಾದದಡಿಯಲ್ಲಿನ ಆರೋಪಗಳಿಂದ ಆಕೆ ಇನ್ನೂ ಮುಕ್ತಳಾಗಿಲ್ಲ. ತಾಯ್ತನದ ಜವಾಬ್ದಾರಿಗಳು, ನಾಲ್ಕು ಗೋಡೆಯೊಳಗಿನ ವ್ಯವಸ್ಥೆಯ ಆಶಯಗಳು, ಅವಳನ್ನು ಬಂಧಿಯಾಗಿಸಿವೆ. ನಗರ ಗ್ರಾಮೀಣವೆನ್ನದೆ ಈ ಕ್ಷಣದಲ್ಲೂ ಮಹಿಳೆಯರ ಮೇಲೆ ನಡೆಯುತ್ತಿರುವ ಎಲ್ಲಾ ರೀತಿಯ ಮಾನಸಿಕ, ದೈಹಿಕ ದೌರ್ಜನ್ಯಗಳು ಮಹಿಳೆಯರ ಸಂವೇದನೆಗೆ ಕೈಗನ್ನಡಿಯಾಗಿವೆ. ಅರುಣಾ ನರೇಂದ್ರ ಕೊಪ್ಪಳ ಇವರ ಕಾವ್ಯಗಳಲ್ಲಿ ಕಂಡುಬರುವ ಸ್ತ್ರೀಸಂವೇದನೆಯ ನೆಲೆಗಳನ್ನು ಭಿನ್ನರೂಪದಲ್ಲಿ ವ್ಯಕ್ತಪಡಿಸಿರುವುದನ್ನು ಉದಾಹರಣೆಗಳ ಮೂಲಕ ತಿಳಿಯಬಹುದು.

ಅರುಣಾ ನರೇಂದ್ರ ಕೊಪ್ಪಳ ಇವರು ವೃತ್ತಿಯಿಂದ ಅಧ್ಯಾಪಕರಾದ್ದರು ಪ್ರವೃತ್ತಿಯಲ್ಲಿ ಉತ್ತಮ ಸಾಹಿತಿಗಳಾಗಿದ್ದಾರೆ. ಇವರ "ಸೀತೆಯ ಸ್ವಗತ" ಎಂಬ ಕಾವ್ಯದಲ್ಲಿ ಒಂದು ಹೆಣ್ಣು ವಿವಾಹ ನಂತರದಲ್ಲಿ ಅನುಭವಿಸುವ ನೋವು ಸಂಕಟಗಳನ್ನು ಸೀತೆಯನ್ನು ಸಂಕೇತವಾಗಿ ಇಟ್ಟುಕೊಂಡು ಆಕೆಯ ಮನಸ್ಸಿನ ತೊಳಲಾಟಗಳನ್ನು ವಿವರಿಸಲಾಗಿದೆ. ಮೆಚ್ಚಿದ ಪುರುಷೋತ್ತಮನನ್ನು ಒರೆಸಿ ಜೀವನದ ಪ್ರತಿ

ಹಂತದಲ್ಲಿಯೂ ಅಂದು ಸೀತೆ ಅನುಭವಿಸಿದ ವೇದನೆಯನ್ನು ಇಂದು ಆಧುನಿಕ ಸಮಾಜದ ಸ್ತ್ರೀಯರು ಅನುಭವಿಸುತ್ತಿದ್ದಾರೆ ಎಂಬುವುದನ್ನು ಈ ಕವಿತೆಯ ಸಾಲುಗಳ ಮೂಲಕ ಕವಯಿತ್ರಿ ವಿವರಿಸುತ್ತಾರೆ.

ಪುರುಷೋತ್ತಮಾ
ಸ್ವಯಂವರದಲ್ಲಿ
ನಿನ್ನ ಮೆಚ್ಚಿಕೊಂಡೇ
ನಾ ಹುಚ್ಚಿಯಾದೆ ಅನಿಸುತ್ತಿದೆ. ! ॥ ೧ ॥

ಚಿಗುರೊಡೆದ ಮರಕೆ
ಕೊಡಲಿಯ ಪೆಟ್ಟು
ಘಾಸಿಗೊಳ್ಳದೆ ಹಿಂಬಾಲಿಸಿದೆ
ಕಲ್ಲುಮುಳ್ಳ ತುಳಿದು ವನವಾಸಕೆ[೧]॥ ೨ ॥

ಸ್ವಯಂವರದಲ್ಲಿ ಎಲ್ಲ ಪುರುಷರಿಗಿಂತ ಉತ್ತಮ ಪುರುಷನೆಂದು ರಾಮನನ್ನು ನೆಚ್ಚಿ ಕಾರ್ಮುಗಿಲ ಗರ್ಜನೆಯ ಕೇಳಿ ನವಿಲು ಸಂತೋಷದಿಂದ ನಲಿಯುವಂತೆ ರಂಗುರಂಗಿನ ಕನಸುಗಳನ್ನು ಕಾಣುತ್ತಾ ಸಪ್ತಪದಿಯನ್ನು ತುಳಿದು ನವಿರು ನವಿರಾದ ಸ್ವಪ್ನಗಳಲ್ಲಿ ತೇಲಾಡುವಾಗ ಬರಸಿಡಿಲು ಬಂದು ಎರಗುವಂತೆ ಜೀವನದ ಎಲ್ಲ ಸುಖವನ್ನು ತೊರೆದು ಕಲ್ಲು ಮುಳ್ಳು ದಾರಿಯನ್ನು ಪತಿಗಾಗಿ ತುಳಿಯುತ್ತಾಳೆ. ವನವಾಸದ ಶಿಕ್ಷೆ ಇರುವುದು ಶ್ರೀರಾಮನಿಗೆ ಮಾತ್ರ ಆದರೆ ಪತಿಯೆ ಪರದೈವ ಎಂದು ತಿಳಿದ ಸೀತೆಯು ರಾಜ್ಯವೈಭೋಗವನ್ನು ತೊರೆದು ಪತಿಯನ್ನು ಹಿಂಬಾಲಿಸುತ್ತಾಳೆ. ಪತಿ ಪತ್ನಿ ಸುಖ – ದುಃಖಗಳನ್ನು ಜೊತೆಯಾಗಿ ಅನುಭವಿಸಬೇಕು ಎಂಬುವುದು ಅವಳ ಮನೋಧೋರಣೆ. ಪ್ರತಿಯೊಬ್ಬ ಸ್ತ್ರೀಯು ತನ್ನ ಪತಿ ಮತ್ತು ಕುಟುಂಬಕ್ಕಾಗಿ ತನ್ನೆಲ್ಲ ಸುಖ, ಸಂತೋಷಗಳನ್ನು ತೊರೆದರು ಅವರು ಪ್ರತಿಫಲವಾಗಿ ಮತ್ತಷ್ಟು ನೋವು ಮತ್ತು ನಿಂದನೆಗಳನ್ನು ಅನುಭವಿಸಬೇಕಾಗುತ್ತದೆ. ಎಂಬ ವಿವರಣೆಯನ್ನು ಮುಂದಿನ ಸಾಲುಗಳಲ್ಲಿ ವಿವರಿಸಿದ್ದಾರೆ.

ಅಶೋಕ ವನದಲ್ಲಿ ಶೋಕ ತಪ್ತಳಾಗಿ
ನಿನಗಾಗಿ ಹಂಬಲಿಸಿದೆ
ಶೀಲ ಉಳಿದರು ನಾ ಶಂಕಿತಳಾದೆ
ಕಳಂಕದ ಕಿರೀಟತೊಟ್ಟು ಕುಬ್ಜಳಾದೆ ॥ ೩ ॥

ಒಡಲೊಳಗೆ ಸುಡುವ
ಅಗ್ನಿ ಪರ್ವತವಿರಲು
ಅಗ್ನಿ ಪರೀಕ್ಷೆಗೆ ನಾ
ಹೆದರುವೆನೆ? ರಾಮಾ! ॥ ೪॥

ಬೆಂಕಿಯಲಿ ಹೂವಾಗಿ ಅರಳಿದರೂ
ತುಂಬುಗರ್ಭಿಣಿ ನನ್ನ
ಕಾಡಿಗಟ್ಟಿದೆಯಲ್ಲ!
ಇದಾವ ರಾಜಧರ್ಮ! ॥ ೫ ॥

ಪತಿಗಾಗಿ ಹಂಬಲಿಸುತ್ತಾ ಪತಿಯದಾರಿಯನ್ನು ಆಶಾಭಾವದಿಂದ ಅಶೋಕ ವನದಲ್ಲಿ ದುಃಖಿಸುತ್ತಾ ಕಾಯುತ್ತಿದ್ದಳು. ಪರ ಪುರುಷನನ್ನು ಕಣ್ಣೆತ್ತಿಯು ನೋಡದೆ ಪತಿಗಾಗಿ ಕಾಯುತ್ತಾ ಅಷ್ಟು ಕಾಲ ನೋವಿನಲ್ಲಿ ಕಳೆದ ಸೀತೆಗೆ ಶೀಲ ಶಂಕಿತಳಾಗಿ ನೋಡುವುದರಿಂದ ಅವಳಲ್ಲಿ ಉಂಟಾಗುವ ಮನೋವೇದನೆ ಅಧಿಕವಾಗುತ್ತದೆ. ಅವಳು ಅನುದಿನ ಪತಿಗಾಗಿ ಕಾಯುವುದರ ಪ್ರತಿಫಲ ಶೀಲ ಕಳಂಕಿತಳು ಎಂಬ ಕಿರೀಟವನ್ನು ಪಡೆಯುವಳು. ಪ್ರತಿಯೊಬ್ಬ ಸ್ತ್ರೀಯು ತನ್ನ ಕುಟುಂಬಕ್ಕಾಗಿ ತನ್ನೆಲ್ಲವನ್ನು ತ್ಯಾಗ ಮಾಡಿ ಹಗಲು ರಾತ್ರಿಯೆನ್ನದೆ ದುಡಿದರು ಕುಟುಂಬಕ್ಕಾಗಿ ನೀನು ಏನು? ಮಾಡಿದೆ ಎಂಬ ಪ್ರಶ್ನೆ ಉಳಿಯುತ್ತದೆ.

ಜೀವನದ ಪ್ರತಿ ಹಂತದಲ್ಲೂ ಎದುರಿಸುವ ಅಂತರಾತ್ಮದ ಅಗ್ನಿ ಪರೀಕ್ಷೆಯ ಮುಂದೆ ಶೀಲ ಶಂಕಿತಳೆಂದು ನಡೆಸುವ ಈ ಅಗ್ನಿ ಪರೀಕ್ಷೆ ಕಠಿಣವಲ್ಲ. ಅಂತರಾತ್ಮದ ಎಷ್ಟೋ ಅಗ್ನಿ ಪರೀಕ್ಷೆಗಳಲ್ಲಿ ಜಯಗಳಿಸಿದ ತನಗೆ ಇದು ಯಾವ ಲೆಕ್ಕವಲ್ಲ, ಆದರೆ ರಾಜಧರ್ಮವೆಂದು ತುಂಬು ಗರ್ಭಿಣಿಯನ್ನು ಕಾಡಿಗೆ ಅಟ್ಟಿದ್ದು ನಿಜವಾದ ಧರ್ಮವಾಗಿರಲಿಲ್ಲ. ಅದು ಸೀತೆಗೆ ಆಘಾತವಾಗಿತ್ತು. ಅದೆ ರೀತಿಯಾಗಿ ತಪ್ಪೇಯಿಲ್ಲದೆ ಎಷ್ಟೋ ಅಬಲೆಯರು ಪುರಾಣ, ಮಹಾಕಾವ್ಯಗಳ ಪುಟಗಳಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವುದಕ್ಕೆ ಹಲವಾರು ನಿದರ್ಶನಗಳಿವೆ ಕೌರವರ ಪಾಂಡವರ ರಾಜಧರ್ಮದಲ್ಲಿ ಅವಮಾನ ಅನುಭವಿಸಿದ್ದು ದ್ರೌಪದಿ, ಯಯಾತಿ ಮಹಾರಾಜನ ರಾಜಧರ್ಮದಲ್ಲಿ ದಾನವಾಗುವ ಮೂಲಕ ಶಿಕ್ಷೆ ಅನುಭವಿಸಿದ್ದು ಮಾಧವಿ, ಅಹಲ್ಯ ಹೀಗೆ ಮುಂತಾದವರು ತಾವು ತಪ್ಪೇ ಮಾಡದೆ ಶಿಕ್ಷೆ ಅನುಭವಿಸಿರುವುದನ್ನು ಕಾಣುತ್ತೇವೆ.

ಒಟ್ಟಾರೆ, ಈ ಶತಮಾನದ ಮಹಿಳಾ ಆಶಯಗಳು ದೌರ್ಜನ್ಯರಹಿತ, ಮಾನವೀಯತೆಯ ಸಮಾನ ಬದುಕು, ಸಮಾಜದ ಎಲ್ಲ ವರ್ಗದ ಜನರದ್ದಾಗಬೇಕು ಎನ್ನುವುದು. ಈ ನಿಟ್ಟನಲ್ಲಿ ಪ್ರತಿಯೊಬ್ಬ ಮಹಿಳೆ ವೇದನೆರಹಿತವಾದ ಬದುಕನ್ನು ಬದುಕಬೇಕು. ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಸದಾಶಯಗಳು ಪ್ರಗತಿಪತದಲ್ಲಿ ಸಾಗಿದಾಗ ಸ್ತ್ರೀ ಪುರುಷ ಲಿಂಗ ತಾರತಮ್ಯವಿಲ್ಲದೆ ಸಮಾನತೆಯಲ್ಲಿ ದೌರ್ಜನ್ಯರಹಿತ ಬದುಕನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

**ಕೊನೆಯ ಟಿಪ್ಪಣಿ**

೧. ಮ. ಕಾ ಪುಟ ಸಂ. ೧೩. ಸೀತೆಯ ಸ್ವಗತ

**ಪರಾಮರ್ಶನ ಗ್ರಂಥಗಳು**


೧. ಸಂಕೀರ್ಣ ಸಂಕಲನಗಳು, ಸಂಪುಟ– ೧ ಮಹಿಳಾ ಕಾವ್ಯ – ಪ್ರ. ಸಂ. ಡಾ. ವಿಷ್ಣು ಶಿಂದೆ
ಪ್ರಕಟಣೆ ವರ್ಷ: ೨೦೧೩
ಪ್ರಕಾಶಕರು: ಡಾ. ಓಂಕಾರ ಕಾಕಡೆ, ನಿರ್ದೇಶಕರು, ಪ್ರಸಾರಾಂಗ
ಕ. ರಾ. ಮ. ವಿಶ್ವವಿದ್ಯಾಲಯ, ವಿಜಯಪುರ
೨. ಸಂವೇದನೆ – ಎಂ. ನಾಗಭೂಷಣ
೩. ಅಂತರಜಾಲ ತಾಣ